**ಕರ್ನಾಟಕ ಸರ್ಕಾರ**

ಸಂ: ಡಿ.ವೈ.ಇ.ಎಸ್/ಕ್ರೀ.ಚ.ಪ್ರೋ/14/2024-25

ಆಯುಕ್ತರ ಕಾರ್ಯಾಲಯ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ,
ಬೆಂಗಳೂರು-01, ದಿನಾಂಕ: 19-09-2024

**<u>ಸುತ್ತೋಲೆ</u>**

ವಿಷಯ: 2024-25ನೇ ಸಾಲಿನ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.
ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/168/2022; ದಿನಾಂಕ: 07.11.2023.

******

2024-25ನೇ ಸಾಲಿನ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯದ ಕ್ರೀಡಾ ಪೋಷಕರನ್ನು ಗುರುತಿಸಿ ಗೌರವಿಸಲು ಅವರಿಗೆ "ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ" ಯನ್ನು ನೀಡಬೇಕಾಗಿರುತ್ತದೆ. ಸದರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯ ಮಾರ್ಗಸೂಚಿ ಮತ್ತು ಅರ್ಜಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗೆ ಸಂಬಂಧಿಸಿದಂತೆ ಆಯಾ ಜಿಲ್ಲೆಗಳಲ್ಲಿ ಸದರಿ ಯೋಜನೆಯ ಮಾರ್ಗಸೂಚಿಯಂತೆ ಅರ್ಹ ಕ್ರೀಡಾ ಪೋಷಕರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿ, ಸ್ವೀಕರಿಸಲಾದ ಪ್ರಸ್ತಾವನೆಗಳನ್ನು ದಿನಾಂಕ:20-09-2024ರೊಳಗೆ ಕೇಂದ್ರ ಕಛೇರಿಗೆ ಕಳುಹಿಸಲು ಸೂಚಿಸಿದೆ.

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಗೆ,
1. ಮಹಾ ನಿರ್ದೇಶಕರು, ಕರ್ನಾಟಕ ಕ್ರೀಡಾ ಪ್ರಾಧಿಕಾರ, ಬೆಂಗಳೂರು.
2. ಎಲ್ಲಾ ಜಿಲ್ಲೆಗಳ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
3. ರಾಜ್ಯದ ಎಲ್ಲಾ ಕ್ರೀಡಾ ಸಂಸ್ಥೆಗಳ ಅಧ್ಯಕ್ಷರು/ಕಾರ್ಯದರ್ಶಿಗಳು.
4. ಹೆಚ್ಚುವರಿ ಪ್ರತಿ.

# ಕರ್ನಾಟಕ ಸರ್ಕಾರ

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

### ಕರ್ನಾಟಕ ಕ್ರೀಡಾ ಪ್ರೋಷಕ ಪ್ರಶಸ್ತಿ ಅರ್ಜಿ ನಮೂನೆ

1) ಅರ್ಜಿ ಸಲ್ಲಿಸುವ ಸಂಸ್ಥೆ/ಕಂಪೆನಿ ಹೆಸರು:
(ದಯವಿಟ್ಟು ಸಾರ್ವಜನಿಕ, ಖಾಸಗಿ, ಸರ್ಕಾರೇತರ ಸಂಸ್ಥೆಯೇ ಎಂದು ನಮೂದಿಸಿ)

2) ಪ್ರಶಸ್ತಿಗೆ ಕೆಳಕಾಣಿಸಿದ ಯಾವ ವಿಭಾಗದಲ್ಲಿ ಅರ್ಜಿ ಸಲ್ಲಿಸಲಾಗಿದೆ. (ವಿಭಾಗವನ್ನು ಆಯ್ಕೆ ಮಾಡಿ)

ಅ. ಕ್ರೀಡಾ ಪ್ರತಿಭೆಯನ್ನು ಎಳೆಯ ಹಂತದಲ್ಲಿಯೇ ಗುರುತಿಸುವಿಕೆ ಮತ್ತು ಪ್ರೋತ್ಸಾಹಿಸುವಿಕೆ ☐

ಆ. ಕಂಪೆನಿಗಳ ಸಾಮಾಜಿಕ ಜವಾಬ್ದಾರಿ ಅಡಿ ಕ್ರೀಡೆಗೆ ಪ್ರೋತ್ಸಾಹ ☐

ಇ. ಕ್ರೀಡಾಪಟುಗಳಿಗೆ ಉದ್ಯೋಗ ನೀಡುವಿಕೆ ಮತ್ತು ಕ್ರೀಡಾ ಕಲ್ಯಾಣ ಕಾರ್ಯಕ್ರಮಗಳು ☐

ಈ. ಅಭಿವೃದ್ಧಿಗಾಗಿ ಕ್ರೀಡೆ ☐

ಉ. ವಿಶ್ವವಿದ್ಯಾನಿಲಯಗಳು/ಶಾಲಾ ಕಾಲೇಜುಗಳು ☐

3) ಸಂಪೂರ್ಣ ವಿಳಾಸ (ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸದೊಂದಿಗೆ)

______________________________

______________________________

______________________________

______________________________

4) ಕ್ರೀಡೆಯ ಬೆಳವಣಿಗೆಗಾಗಿ ಕಳೆದ ಮೂರು ವರ್ಷಗಳಲ್ಲಿ ನೀಡಿರುವ ನೆರವು (ಸಹಾಯ)

(ವರ್ಷವಾರು)

ರೂ.ಗಳಲ್ಲಿ

(ಕಳೆದ ಮೂರು ಆರ್ಥಿಕ ವರ್ಷಗಳಿಗೆ ಪ್ರತ್ಯೇಕವಾಗಿ ಒದಗಿಸುವುದು)

5) ಸಂಸ್ಥೆಯ ಸಂಕ್ಷಿಪ್ತ ವಿವರ:

(ಅಗತ್ಯವಿದ್ದಲ್ಲಿ ಪ್ರತ್ಯೇಕ ಪುಟದಲ್ಲಿ ನೀಡಬಹುದು)

6) ಅರ್ಜಿ ಸಲ್ಲಿಸಿದ ಪ್ರಶಸ್ತಿಯ ವಿಭಾಗದಲ್ಲಿ ನೀಡಲಾದ ನೆರವಿನ ಬಗ್ಗೆ ಆಯ್ಕೆ ಮಾನದಂಡಗಳಿಗೆ

ಸಂಬಂಧಿಸಿದಂತೆ ಮಾಹಿತಿ ಒದಗಿಸುವುದು.

| ಪ್ರಶಸ್ತಿ ವಿಭಾಗ | ಆಯ್ಕೆ ಮಾನದಂಡಗಳು | ಅಗತ್ಯವಿದ್ದಲ್ಲಿ ಹೆಸರುಗಳನ್ನು ಪ್ರತ್ಯೇಕ ಪುಟದಲ್ಲಿ ನೀಡುವುದು |
|---|---|---|
| ಕ್ರೀಡಾ ಪ್ರತಿಭೆಯನ್ನು ಎಳೆಯ ಹಂತದಲ್ಲಿಯೇ ಗುರುತಿಸುವಿಕೆ ಮತ್ತು ಪ್ರೋತ್ಸಾಹಿಸುವಿಕೆ: | 1. ಕಳೆದ ಮೂರು ವರ್ಷಗಳಲ್ಲಿ ಗುರುತಿಸಿ, ಪೋಷಿಸಿದ ಕ್ರೀಡಾಪಟುಗಳ ಸಂಖ್ಯೆ (ವರ್ಷವಾರು)<br>2. ಕ್ರೀಡಾ ಮೂಲಭೂತ ಸೌಕರ್ಯಗಳನ್ನು ಸೃಜಿಸಿದ ವಿವರ<br>3. ಶಾಲೆ, ಕಾಲೇಜು, ಸಂಘಗಳು ಮತ್ತಿತರೆ ಘಟಕಗಳನ್ನು ದತ್ತು ತೆಗೆದುಕೊಂಡಿರುವ ಸಂಖ್ಯೆ<br>4. ತರಬೇತಿ ನೀಡಿದ ಕ್ರೀಡಾಪಟುಗಳ ಸಂಖ್ಯೆ<br>5. ಕ್ರೀಡಾಕಿಟ್ ಮತ್ತಿತರ ನೆರವು<br>6. ಕ್ರೀಡಾಕೂಟಗಳು ಮತ್ತು ಪಂದ್ಯಗಳನ್ನು ಆಯೋಜಿಸಿರುವ ಸಂಖ್ಯೆ<br>7. ಗುರುತಿಸಿದ ಕ್ರೀಡಾಪಟುಗಳ ಕ್ರೀಡಾ ಸಾಧನೆ<br>8. ಕ್ರೀಡಾಪಟುಗಳಿಗಾಗಿ ಪ್ರಾರಂಭಿಸಿರುವ ಇತರೆ ಉಪಕ್ರಮಗಳು | |
| ಕಂಪನಿಗಳ ಸಾಮಾಜಿಕ ಜವಾಬ್ದಾರಿ ಅಡಿ ಕ್ರೀಡೆಗೆ ಪ್ರೋತ್ಸಾಹ: | 1. ಕಂಪನಿಗಳ ಸಾಮಾಜಿಕ ಜವಾಬ್ದಾರಿ ಅಡಿ ಕ್ರೀಡಾ ಚಟುವಟಿಕೆಗಳಿಗೆ ಮೀಸಲಿರಿಸಿದ ಅನುದಾನ (ಕಳೆದ ಮೂರು ವರ್ಷಗಳ ವಿವರ)<br>2. ಕ್ರೀಡಾ ಚಟುವಟಿಕೆಗಳ ವಿವರ (ಕ್ರೀಡಾ ಮೂಲಭೂತ ಸೌಕರ್ಯಗಳ ಸೃಜನೆ, ಅಭಿವೃದ್ಧಿ/ಉನ್ನತೀಕರಣ, ಕ್ರೀಡಾ ಸಾಮಗ್ರಿಗಳ ಪೂರೈಕೆ, ತರಬೇತುದಾರರ ನಿಯೋಜನೆ, ಕ್ರೀಡಾಕೂಟಗಳ ಆಯೋಜನೆ, ಕ್ರೀಡಾ ತರಬೇತಿಗಾಗಿ ಸಿ.ಎಸ್.ಆರ್. ಅಡಿ ಅನುದಾನ ವ್ಯಯಿಸಿರುವ ವಿವರ) | |
| ಕ್ರೀಡಾಪಟುಗಳಿಗೆ ಉದ್ಯೋಗ ನೀಡುವಿಕೆ ಮತ್ತು ಕ್ರೀಡಾ ಕಲ್ಯಾಣ ಕಾರ್ಯಕ್ರಮಗಳು: | 1. ಕಳೆದ ಮೂರು ವರ್ಷಗಳಲ್ಲಿ ಕ್ರೀಡಾಪಟುಗಳಿಗೆ ಉದ್ಯೋಗ ಒದಗಿಸಿದ ವಿವರ (ವರ್ಷವಾರು ಸಂಖ್ಯೆ)<br>2. ನೇಮಕಾತಿ ಹಂತ ಮತ್ತು ವೇತನ ವಿವರ<br>3. ಉದ್ಯೋಗದಲ್ಲಿ ಒದಗಿಸಿದ ಬಡ್ತಿ ಅವಕಾಶಗಳು<br>4. ಉದ್ಯೋಗ ಪಡೆದ ಕ್ರೀಡಾಪಟುಗಳ ಕ್ರೀಡಾ ಸಾಧನೆ<br>5. ಇತರೆ ಕ್ರೀಡಾ ಕಲ್ಯಾಣ ಕಾರ್ಯಕ್ರಮಗಳು | |

| | | |
|---|---|---|
| ಅಭಿವೃದ್ಧಿ ಕ್ರೀಡೆ | 1. ಕ್ರೀಡೆಯನ್ನು ಅಭಿವೃದ್ಧಿ ಮತ್ತು ಶಾಂತಿ ಸ್ಥಾಪನೆ ಉದ್ದೇಶಗಳ ಈಡೇರಿಕೆಗಾಗಿ ಬಳಸಿಕೊಳ್ಳಲು ಆಯೋಜಿಸಿದ ಕಾರ್ಯಕ್ರಮಗಳ ವಿವರ<br>2. ಸಮಾಜದ ಎಲ್ಲರಿಗೂ ಸುರಕ್ಷಿತವಾಗಿ ಕ್ರೀಡಾ ವಾತಾವರಣ ದೊರಕುವಂತಾಗಲು ಕೈಗೊಂಡ ಚಟುವಟಿಕೆಗಳು<br>3. ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳನ್ನು ಸಮರ್ಥವಾಗಿ ನೀಡಲು ಶಾಲೆಗಳು ಮತ್ತು ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿ ಹೆಚ್ಚಳಕ್ಕಾಗಿ ಆಯೋಜಿಸಿದ ಚಟುವಟಿಕೆಗಳು<br>4. ಸಂಸ್ಥೆಯು ಪ್ರಾರಂಭವಾದ ವರ್ಷ | |
| ವಿಶ್ವವಿದ್ಯಾನಿಲಯಗಳು/ ಶಾಲಾ ಕಾಲೇಜುಗಳು | 1. ಕ್ರೀಡಾಪಟುಗಳಿಗೆ ಪ್ರವೇಶಾತಿಯಲ್ಲಿ ಮೀಸಲಾತಿ (ಕಳೆದ ಮೂರು ವರ್ಷಗಳ ಪ್ರತ್ಯೇಕ ಸಂಖ್ಯೆ)<br>2. ಕ್ರೀಡಾಪಟುಗಳಿಗೆ ನೀಡಲಾದ ಇತರೆ ಸೌಲಭ್ಯಗಳು (ಕೃಪಾಂಕಗಳು, ಕ್ರೀಡಾ ಕಿಟ್, ಹಾಜರಾತಿ ವಿನಾಯಿತಿ, ಇತ್ಯಾದಿ)<br>3. ಪ್ರವೇಶ ನೀಡಿದ ಕ್ರೀಡಾಪಟುಗಳ ಸಾಧನೆ (ಕಳೆದ ಮೂರು ವರ್ಷಗಳ ಸಾಧನೆ ವಿವರಗಳು ಪ್ರತ್ಯೇಕ)<br>4. ಕ್ರೀಡಾಪಟುಗಳಿಗಾಗಿ ಪ್ರಾರಂಭಿಸಲಾದ ಕ್ರೀಡಾ ವಿಷಯಗಳು | |

7) ಇತರೆ ಸಾಧನೆಗಳು

8) ಇತರೆ ಪ್ರಶಸ್ತಿಗಳು
(ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ/
ಇತರ ಸಂಘ-ಸಂಸ್ಥೆಗಳಿಂದ ಪಡೆದಿದ್ದಲ್ಲಿ)

-ಸಹಿ-
(ಸಂಸ್ಥೆ/ಕಂಪನಿಯ ಮೊಹರಿನೊಂದಿಗೆ)

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** "ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ" ನೀಡುವ ಕುರಿತು ರೂಪಿಸಲಾಗಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಯುಸೇಇ 95 ಯುಸೇಕ್ರೀ 2017; ದಿನಾಂಕ: 25/05/2017.
2. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ:ಡಿವೈಇಎಸ್ /ಕ್ರೀಚಪ್ರೊ/28/2023-24; ದಿನಾಂಕ:03.08.2023.

*****

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಕ್ರೀಡೆಯ ಅಭಿವೃದ್ಧಿಗೆ ಅತ್ಯುತ್ತಮ ಕೊಡುಗೆ ನೀಡಿದ ರಾಜ್ಯದ ಕ್ರೀಡಾ ಪೋಷಕರನ್ನು ಗೌರವಿಸಲು "ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ" ನೀಡುವ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಬದಲಾದ ಕಾಲಮಾನಕ್ಕೆ ತಕ್ಕಂತೆ ಸದರಿ ಮಾರ್ಗಸೂಚಿಗಳನ್ನು ಪರಿಷ್ಕರಿಸುವ ಅಗತ್ಯವಿದ್ದು, ಪ್ರಸ್ತುತ ಆರ್ಥಿಕ ಸ್ಥಿತಿಗತಿ ರಾಜ್ಯದ ಕ್ರೀಡಾ ಅಭಿವೃದ್ಧಿಯ ಬೆಳವಣಿಗೆ ಇತ್ಯಾದಿ ಅಂಶಗಳ ಹಿನ್ನಲೆಯಲ್ಲಿ ಮೇಲೆ(2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಮಾರ್ಗಸೂಚಿಗಳನ್ನು ಪರಿಷ್ಕರಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/168/2022**
**ಬೆಂಗಳೂರು, ದಿನಾಂಕ:07.11.2023.**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ರಾಜ್ಯದ ಕ್ರೀಡೆಯ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ರಾಜ್ಯದ ಕ್ರೀಡಾ ಪೋಷಕರನ್ನು ಗೌರವಿಸಲು ನೀಡುವ "ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ"ಗೆ ಸಂಬಂಧಿಸಿದಂತೆ ಮೇಲೆ ಓದಲಾದ (1)ರ ಆದೇಶದಲ್ಲಿನ ಮಾರ್ಗಸೂಚಿಗಳನ್ನು ರದ್ದುಪಡಿಸಿ, ಈ ಆದೇಶದ ಅನುಬಂಧದಲ್ಲಿರುವ ಪರಿಷ್ಕೃತ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಯಶ್ರೀ ಎಸ್.ಎನ್.)
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಇವರಿಗೆ,

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ)/(ಜಿ ಮತ್ತು ಎಸ್ ಎಸ್ ಎ)/(ಇ ಮತ್ತು ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.

-2

2. ಆಯುಕ್ತರು,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಎಲ್ಲಾ ಜಂಟಿ ನಿರ್ದೇಶಕರು/ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ-(ಆಯುಕ್ತರು,ಯುಸಕ್ರೀ ಮೂಲಕ).
4. ಉಪ ನಿರ್ದೇಶಕರು, ಟಿಎನ್ ಎಂಸಿ, ಖನಿಜ ಭವನ ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ.

## ಸರ್ಕಾರದ ಆದೇಶ ಸಂಖ್ಯೆ:ವೈಎಸ್ ಡಿ-ಸಿಡಿಎನ್/168/2022: ದಿನಾಂಕ:07.11.2023ರ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯ ಪರಿಷ್ಕೃತ ಮಾರ್ಗಸೂಚಿಗಳು-2023

**ಪ್ರಸ್ತಾವನೆ:**

ಕರ್ನಾಟಕ ರಾಜ್ಯದ ಕ್ರೀಡಾ ಪೋಷಕರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು.

**ಉದ್ದೇಶ:**

ಅ) ರಾಜ್ಯದಲ್ಲಿ ಕ್ರೀಡಾಪಟುಗಳು ಕ್ರೀಡಾ ಕ್ಷೇತ್ರದಲ್ಲಿ ಸಾಧಿಸಿದ ಅತ್ಯುತ್ತಮ ಸಾಧನೆಗಳನ್ನು ಗುರುತಿಸಿ ಕ್ರೀಡಾ ಪೋಷಕರಿಗೆ ಪ್ರಶಸ್ತಿಯನ್ನು ನೀಡಿ ಪ್ರೋತ್ಸಾಹಿಸುವುದು.
ಆ) ಕ್ರೀಡಾ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವುದು ಮತ್ತು ಕ್ರೀಡಾ ಪಟುಗಳನ್ನು ಗುರುತಿಸುವುದು.
ಇ) ಕ್ರೀಡಾ ಪಟುಗಳ ಅಭಿವೃದ್ಧಿಗೆ ಉತ್ತೇಜನ ನೀಡುವುದು.
ಈ) ಕ್ರೀಡಾ ಪಟುಗಳಿಗೆ ಉದ್ಯೋಗವನ್ನು ಸೃಷ್ಟಿಸುವ ಹಾಗೂ ಕ್ರೀಡಾ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಘಟಕರನ್ನು ಗುರುತಿಸುವುದು.
ಉ) ಕ್ರೀಡಾ ಪಟುಗಳಿಗೆ ಶುಲ್ಕ ರಹಿತ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದು.

**ಪರಿಭಾಷೆ:**

ಈ ಮಾರ್ಗಸೂಚಿಗಳಲ್ಲಿ ಸಂದರ್ಭ ಅನ್ಯತಾ ಅಗತ್ಯಪಡಿಸಿದ ಹೊರತು

ಅ) ಸರ್ಕಾರ: ಕರ್ನಾಟಕ ಸರ್ಕಾರ
ಆ) ಇಲಾಖೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಇ) ವರ್ಷ: ಜನವರಿ 01 ರಿಂದ ಡಿಸೆಂಬರ್ 31 ರವರೆಗೆ
ಈ) ಪ್ರಶಸ್ತಿ: ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ
ಉ) ಸಮಿತಿ: ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ಆಯ್ಕೆ ಸಮಿತಿ/ಪರಿಶೀಲನಾ ಸಮಿತಿ

**ಅರ್ಜಿ ಸ್ವೀಕಾರ:**

ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗೆ ಈ ಕೆಳಕಾಣಿಸಿದ ಇಲಾಖೆ, ಸಂಘ-ಸಂಸ್ಥೆಗಳ ಮೂಲಕ ಅರ್ಜಿ ಸ್ವೀಕರಿಸಲಾಗುವುದು.
ಅ)ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲಾ ಕಛೇರಿಗಳಿಂದ.
ಆ) ಕ್ರೀಡಾ ಸಂಘ/ಸಂಸ್ಥೆಗಳು
ಇ) ನೇರವಾಗಿ ಅರ್ಜಿ ಸಲ್ಲಿಸಬಹುದು
ಈ)ವಿಶ್ವ ವಿದ್ಯಾಲಯ/ಕಾಲೇಜು
ಉ) ಮಾಧ್ಯಮದ ಮೂಲಕ

**ಅರ್ಜಿ ಸಲ್ಲಿಸುವ ವಿಧಾನ:**

1. ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ನಿರ್ದೇಶಕರು/ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ನೋಂದಣಿ ಅಂಚೆ/ ಆನ್ಲೈನ್ (Online)/ಖುದ್ದಾಗಿ ಸರ್ಕಾರಿ ರಜಾದಿನಗಳನ್ನು ಹೊರತುಪಡಿಸಿ ಕಛೇರಿಯ ವೇಳೆಯಲ್ಲಿ ನಿಗದಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

2. ಅರ್ಜಿ ನಮೂನೆಯ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ತುಂಬತಕ್ಕದ್ದು.

3. 5 ವರ್ಷಗಳ ಕ್ರೀಡಾ ಸಾಧನೆಯ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

4. ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಪ್ರಶಸ್ತಿ ನೀಡಿದ ವರ್ಷ ಸೇರಿದಂತೆ ಕಳೆದ 5 ವರ್ಷಗಳ ಕ್ರೀಡಾ ಸಾಧನೆಯ ಪ್ರಸ್ತಾವನೆ/ವರದಿ, ಪ್ರಶಸ್ತಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5. ಅರ್ಜಿ ನಮೂನೆಯೊಂದಿಗೆ ಸಲ್ಲಿಸುವ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

**ಅರ್ಹತೆ:**

1. ಕ್ರೀಡಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ರೀಡೆಯ ಅಭಿವೃದ್ಧಿಗೆ ನೆರವು ನೀಡಿ 5 ವರ್ಷಗಳಲ್ಲಿ ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾ ಕ್ಷೇತ್ರದಲ್ಲಿ ಕ್ರೀಡಾಪಟುಗಳು ಸಾಧನೆಗೈಯಲು ಕೊಡುಗೆ ನೀಡಿದ ಕ್ರೀಡಾಪೋಷಕರು ಈ ಪ್ರಶಸ್ತಿಗೆ ಅರ್ಹರಿರುತ್ತಾರೆ.

**ಪ್ರಶಸ್ತಿ:**

ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯು ಪ್ರಮಾಣಪತ್ರ, ಪ್ರಶಸ್ತಿಫಲಕ, ರೂ10.00 ಲಕ್ಷಗಳ ನಗದು ಬಹುಮಾನ ಒಳಗೊಂಡಿರುತ್ತದೆ.

**ಅನರ್ಹತೆ:**

I. ನೀಡಲಾದ ದಾಖಲೆಗಳಲ್ಲಿ ತಪ್ಪು ಮಾಹಿತಿಯನ್ನು ನೀಡಿರುವುದು ಗಮನಕ್ಕೆ ಬಂದಲ್ಲಿ ಅಂತಹ ಅರ್ಜಿಗಳನ್ನು ಅನರ್ಹಗೊಳಿಸುವುದರ ಜೊತೆಗೆ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಆಜೀವ ನಿಷೇಧ ಹೇರಲಾಗುವುದು ಮತ್ತು ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.
II. ಈ ಹಿಂದೆ ಈಗಾಗಲೇ ಈ ಪ್ರಶಸ್ತಿಯನ್ನುಪಡೆದವರು ಅರ್ಹರಿರುವುದಿಲ್ಲ.
III.ಪ್ರಶಸ್ತಿಗಾಗಿ ಶಿಫಾರಸ್ಸು ಮಾಡಿರುವ ಕ್ರೀಡಾ ಪೋಷಕರು ಈ ಪ್ರಶಸ್ತಿಯ ನೀತಿನಿಯಮಗಳನ್ನು ಒಪ್ಪಿಕೊಳ್ಳತಕ್ಕದ್ದು.

**ಪ್ರಶಸ್ತಿಯ ಸಂಖ್ಯೆ:**

ಪ್ರತಿವರ್ಷ 10 ಕ್ರೀಡಾ ಪೋಷಕರುಗಳಿಗೆ ಮಾತ್ರ ಪ್ರಶಸ್ತಿಯನ್ನು ನೀಡತಕ್ಕದ್ದು. ಭಾರತದ ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯದಿಂದ ಮಾನ್ಯತೆ ನೀಡಿದ ಕ್ರೀಡಾ ಸಂಘಸಂಸ್ಥೆಗಳಿಂದ ಆಯೋಜಿಸಲಾದ ಕ್ರೀಡಾ ಸಾಧನೆಗಳನ್ನು ಪರಿಗಣಿಸಿ ಪ್ರಶಸ್ತಿ ನೀಡತಕ್ಕದ್ದು.

**ಪರಿಶೀಲನಾ ಸಮಿತಿ:**

ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗಾಗಿ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸಲು ನಿರ್ದೇಶಕರು/ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಪರಿಶೀಲನಾ ಸಮಿತಿ ರಚಿಸಲಾಗಿದೆ.

| ಕ್ರ.ಸಂ. | ಹುದ್ದೆ | ಪದನಾಮ |
|---|---|---|
| 1 | ಆಯುಕ್ತರು/ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | ಅಧ್ಯಕ್ಷರು |
| 2 | ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ | ಉಪಾಧ್ಯಕ್ಷರು |
| 3 | ಸರ್ಕಾರದ ಜಂಟಿ/ಉಪ ಕಾರ್ಯದರ್ಶಿ, ಯುವ ಸಬಲೀಕರಣ ಇಲಾಖೆ | ಸದಸ್ಯರು |

| | | |
|---|---|---|
| 4 | ಪದ್ಮ ಶ್ರೀ ಪ್ರಶಸ್ತಿ ವಿಜೇತರು | ಸದಸ್ಯರು |
| 5 | ಅಧ್ಯಕ್ಷರು, ಸರ್ಕಾರೇತರ (ಎನ್ ಜಿ ಓ) ಸಂಸ್ಥೆ | ಸದಸ್ಯರು |
| 6 | ಜಂಟಿ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | ಸದಸ್ಯ ಕಾರ್ಯದರ್ಶಿ |

ಪರಿಶೀಲನಾ ಸಮಯದಲ್ಲಿ ಅಗತ್ಯತೆ ಕಂಡು ಬಂದಾಗ ನಿವೃತ್ತ/ ಹಿರಿಯ ಕ್ರೀಡಾಪಟುಗಳನ್ನು/ ತರಬೇತುದಾರರನ್ನು ಆಹ್ವಾನಿಸಿ ಸಲಹೆ ಪಡೆಯಬಹುದು. ಈ ಆಹ್ವಾನಿತರ ನೇಮಕದ ಬಗ್ಗೆ ನಿರ್ದೇಶಕರು/ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಸೂಕ್ತ ಆದೇಶವನ್ನು ಹೊರಡಿಸತಕ್ಕದ್ದು. ಹೀಗೆ ನೇಮಕಗೊಳ್ಳುವ ಅಧಿಕಾರೇತರ ಸದಸ್ಯರುಗಳ ಅವಧಿ 2 ವರ್ಷಗಳಾಗಿರುತ್ತದೆ.

**ಆಯ್ಕೆಸಮಿತಿ:**

ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ಆಯ್ಕೆಗಾಗಿ ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಆಯ್ಕೆ ಸಮಿತಿ ರಚಿಸಲಾಗಿದೆ. ಈ ಸಮಿತಿಯಲ್ಲಿರುವ ಅಧಿಕಾರೇತರ ಸದಸ್ಯರುಗಳ ಅವಧಿ 2 ವರ್ಷಗಳಾಗಿರುತ್ತದೆ.

| ಕ್ರ. ಸಂ. | ಹುದ್ದೆ | ಪದನಾಮ |
|---|---|---|
| 1 | ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು, | ಅಧ್ಯಕ್ಷರು |
| 2 | ಉಪಾಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರ | ಉಪಾಧ್ಯಕ್ಷರು |
| 3 | ಅಧ್ಯಕ್ಷರು, ಸರ್ಕಾರೇತರ(ಎನ್ ಜಿ ಓ )ಸಂಸ್ಥೆ | ಸದಸ್ಯರು |
| 4 | ಭಾರತೀಯ ಕ್ರೀಡಾ ಪ್ರಾಧಿಕಾರದ ಒಬ್ಬರು ಪ್ರತಿನಿಧಿ | ಸದಸ್ಯರು |
| 5 | ಪದ್ಮ ಶ್ರೀ ಪ್ರಶಸ್ತಿ ವಿಜೇತರು | ಸದಸ್ಯರು |
| 6 | ಜೈನ್ ವಿಶ್ವ ವಿದ್ಯಾಲಯ, ಬೆಂಗಳೂರು ಇವರ ಒಬ್ಬರು ಪ್ರತಿನಿಧಿ | ಸದಸ್ಯರು |
| 7 | ಆಯುಕ್ತರು/ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | ಸದಸ್ಯ ಕಾರ್ಯದರ್ಶಿ |

ಅಧಿಕಾರೇತರ ಸದಸ್ಯರುಗಳು 'ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ' ನೀಡುವ ಸಂಬಂಧ ಯಾವುದೇ ಶಿಫಾರಸ್ಸು ಅಧಿಕೃತವಾಗಿ ಮಾಡಲಾಗಿದ್ದಲ್ಲಿ ಅಂತಹ ಪ್ರಸ್ತಾವನೆ ಆಯ್ಕೆ ಸಮಿತಿ ಮುಂದೆ ಚರ್ಚೆ ಬಂದಾಗ ಶಿಫಾರಸ್ಸು ಮಾಡಿದ ಅಧಿಕಾರೇತರ ಸದಸ್ಯರು ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ. ಈ ಮೇಲ್ಕಂಡ ಆಯ್ಕೆ ಸಮಿತಿಯ ಪ್ರಸ್ತಾವನೆಗಳನ್ನು ಅಂಗೀಕರಿಸಲಿದ್ದು, ಸರ್ಕಾರದ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

ಜಯಶ್ರೀ ಎಸ್.ಎನ್.
(ಜಯಶ್ರೀ ಎಸ್.ಎನ್.)
ಸರ್ಕಾರದ ಉಪ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
7/11/23